Ex.71-2009
R.W.2
05/07/2017

ದಿಃ 05-07-2017 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಪಾಟೀ ಸವಾಲು : ತಕರಾರುದಾರರಾದ 1 ರವರಿಂದ

1ನೇ ತಕರಾರುದಾರರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲು : 2 ನೇ ತಕರಾರುದಾರರಿಂದ

ನಾವು ಸ್ಥಳಕ್ಕೆ ಹೋದಾಗ ಡಿಕ್ರಿದಾರರು, ಸರ್ವೆಯರು, ಕೋರ್ಟ ಅಮೀನರು ಹಾಜರು ಇದ್ದರು. ನನ್ನ ಜೊತೆಗೆ ಮಹಿಳಾ ಡಬ್ಲ್ಯೂ ಪಿ.ಸಿ. ಲಲಿತಮ್ಮ ಹಾಗೂ ಪಿಸಿ ಸಿದ್ದಲಿಂಗಪ್ಪರವರು ಬಂದಿದ್ದರು. ಆ ಸಮಯದಲ್ಲಿ ಜಮೀನಿನ ಆಜುಬಾಜುದಾರರು ಇರಲಿಲ್ಲ. ನಿಸಿ.1ರಲ್ಲಿ ನಮೂದು ಮಾಡಿರುವ ಆಸ್ತಿಯ ಸರ್ವೆ ನಂಬರ್, ಚಕ್ಕುಬಂದಿಯನ್ನು ಹೇಳಲು ಅಗುವುದಿಲ್ಲ. ನಿಸಿ 1 ಬರೆಯುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಕಚೇರಿಯಲ್ಲಿ ತಯಾರು ಮಾಡಿದ್ದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ವಾದೀನ ವಹಿಸಿದ ಜಮೀನಿನ ಅಜುಬಾಜಿನಲ್ಲಿ ರಸ್ತೆ ಹಾದು ಹೋಗಿರಲಿಲ್ಲ. ಸ್ವಾದೀನ ವಹಿಸಿದ್ದ ಜಮೀನಿನ ಪೂರ್ತಿ ವಿಸ್ತೀರ್ಣ ಮತ್ತು ಚಕ್ಕುಬಂದಿ ಮತ್ತು ನಂಬರ್‌ನ್ನು ಹೇಳಲು ಆಗುವುದಿಲ್ಲ. ಪಶ್ಚಿಮ ದಿಕ್ಕಿಗೆ ಹರಿಹರ-ಹರಪನಹಳ್ಳಿ ರಸ್ತೆ ಇದ್ದು ಅದನ್ನು ನಾನು ನೋಡಿರುತ್ತೇನೆ. ಪೂರ್ವ ದಿಕ್ಕಿಗೆ ಹರಿಹರ-ಹರಪನಹಳ್ಳಿ ರಸ್ತೆ ಇರುವುದಿಲ್ಲ. ರಸ್ತೆಯ ಪೂರ್ವಕ್ಕೆ ಕಿರ್ಲೋಸ್ಕರ್‌ರವರ ಎಜುಕೇಷನ್ ಟ್ರಸ್ಟ್ ಕಟ್ಟಡ ಇರುತ್ತದೆ ಎಂದರೆ ಸರಿ. ಸದರಿ ಕಟ್ಟಡದ ಪೂರ್ವಕ್ಕೆ ಖಾಲಿ ನಿವೇಶನಗಳು ಇರುತ್ತವೆ ಎಂದರೆ ಸರಿ. ಈಗ ಹೇಳಿದ ಚಕ್ಕುಬಂದಿಯನ್ನು ನಿಸಿ1 ದಾಖಲೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನ್ಯಾಯಾಲಯದ ಅಮೀನರು ಆಸ್ತಿಯ ಸ್ವಾದೀನವನ್ನು ಡಿಕ್ರಿದಾರರರಿಗೆ ವಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಡಿಕ್ರಿದಾರರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

Ex.71-2009
R.W.2
05/07/2017

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

ಓ ಹೇ ಕೇ ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.